ಶ್ರೀ ಆರ್. ವೆಂಕಟರಾಮಯ್ಯ.—ನೀವೇ ಗೂಟ ಹೊಡೆಸಿಕೊಂಡು ಇರುವಿರಂತೆ.

(ಗೊಂದಲ)

(ಈ ಹಂತದಲ್ಲಿ ಸಿ.ಪಿ.ಐ. ಸದಸ್ಯರಾದ ಶ್ರೀ ಎಂ.ಎಸ್ ಕೃಷ್ಣನ್, ಶ್ರೀ ಯು. ಭೂಪತಿ ಸಿ.ಪಿ.ಐ. ಎಂ. ಸದಸ್ಯರಾದ ಶ್ರೀ ಆರ್ ವೆಂಕಟರಾಮಯ್ಯರವರು ಹಾಗೂ ಬಿ.ಜೆಪಿ.ಯ ಸದಸ್ಯರಾಗಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಭಾ ತ್ಯಾಗ ಮಾಡಿದರು)

ಶ್ರೀ ಅಬ್ದುಲ್ ನಜೀರ್ ಸಾಬ್.—ಇಲ್ಲಿ ನಿಲುವಳಿ ಸೂಚನೆಯ ಬಗ್ಗೆ ಚರ್ಚೆ ನಡೆದಿದೆ. ಸುಮಾರು ೩ ಗಂಟೆಗಳ ಕಾಲ ಒಂದೇ ಕಡೆಯ ವಾದವನ್ನು ಕೇಳಿದ್ದೀರಿ. ಅಷ್ಟು ಧಾರಾಳವಾಗಿ ಉದಾರವಾಗಿ ತಾವೂ ಅವರ ವಾದಕ್ಕೆ ಅವಕಾಶ ಕೊಟ್ಟು ಮೂರು ಗಂಟೆಗಳ ಕಾಲ ಕೇಳಿದ್ದೀರಿ. ನಂತರ ಸರ್ಕಾರದ ಪರವಾಗಿ ಮಾತನಾಡುವುದಕ್ಕೆ ಎದ್ದಾಗ ನಾನು ಈ ಮಾತನ್ನು ಪ್ರಾರಂಭ ಮಾಡಿದಾಗಲೇ ಹೇಳಿದ್ದೇನೆ· ಜನತಂತ್ರದ ಬಗ್ಗೆ ಬಹಳ ದೊಡ್ಡ ದೊಡ್ಡ ಭಾಷಣಗಳನ್ನು, ಕಣ್ಣೀರನ್ನು ಸುರಿಸಿದ್ದಾರೆ ನಮ್ಮ ಪ್ರತಿ ಪಕ್ಷದ ಮಿತ್ರರು, ನಾವು ಸಂಬ್ಬರಾಯರ ಕಟ್ಟೆ ಭಾಷಣ ಮಾಡಿ ಜನ ತಂತ್ರವನ್ನು ಉಳಿಸುವುದಾಕ್ಕಾಗುವುದಿಲ್ಲ, ಜನತಂತ್ರವನ್ನು ಉಳಿಸಬೇಕಾದರೆ, ಮಾಡಿರತಕ್ಕ ಶಾಸನವನ್ನು ಗೌರವಿಸತಕ್ಕ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಷ್ಟೂವ ಅಭಿಪ್ರಾಯದಿಂದ ಆ ಮಾತನ್ನು ಹೇಳಿದ್ದೇನೆ. ಸಂಬ್ಬರಾಯರ ಕಟ್ಟೆ ಭಾಷಣ ಎಂದರೆ ಅದೇನೂ ಅವಮಾನವಲ್ಲ. ಸಂಬ್ಬರಾಯರ ಕಟ್ಟೆಯಲ್ಲಿ ಭಾಷಣ ಮಾಡುವಾಗ, ಸ್ವಾತಂತ್ರ್ಯಕ್ಕೆ ಪೂರ್ವ. ಅಲ್ಲಿಗೆ ಅನೇಕ ಸೀನಿಯರ್ಸ್ ರಾಜಾಜಿಯವರು ಬಂದು ಭಾಷಣ ಮಾಡಿದರು. ಇನ್ನೂ ಮಂಂತಾದವರು ಬಂದು ಭಾಷಣ ಮಾಡಿದರು. ಅವರು ಅಲ್ಲಿ ಭಾಷಣ ಮಾಡುವಾಗ ಸ್ವಾತಂತ್ರ್ಯದ ಗುರಿ ಇತ್ತು. ಕಾದು ನಮ್ಮದಪ್ಪ, ಪರವಾನಗಿ ಏಕೆ ಬೇಕು ಸರ್ಕಾರದ್ದು, ಆ ತರಹದ ಮಾತಿನಲ್ಲಿ ಹೇಳಿದರು? ಹಾಗೆ ನಾವೂ ಕಟ್ಟು ಕಟ್ಟಲೆ ಇಲ್ಲದೆ ಜನತಂತ್ರದಲ್ಲಿ ಹಾಗೆ ಹೇಳುವುದಕ್ಕೆ ಬರುವುದಿಲ್ಲ. ಕಟ್ಟು ಕಟ್ಟಲೆಯೊಳಗೆ ಮಾತನಾಡಬೇಕು ಎಂಬ ಉದ್ದೇಶದಿಂದ ಆ ಮಾತನ್ನು ನಾನು ಹೇಳಿದೆ. ಅವರು ನೇರವಾಗಿ ೩ ಪ್ರಶ್ನೆಗಳನ್ನು ಇವತ್ತು ನಮ್ಮ ಮುಂದಿಟ್ಟಿದ್ದಾರೆ. ನಾನು ಅದನ್ನು ಇನ್ನೂ ಹೆಚ್ಚು ವಿಸ್ತಾರ ಮಾಡುವುದಕ್ಕೆ ಹೋಗುವುದಿಲ್ಲ. ಇದು ಒಂದು ಕಾನೂನಿಗೆ ಸಂಬಂಧಪಟ್ಟಿದ್ದು ಎಲ್ಲರೂ ಕಾನೂನಿಗೆ ವಿರೋಧವಾಗಿ ನಡೆದುಕೊಂಡಿದ್ದೇವೆ ಎನ್ನತಕ್ಕಂತಹ ಪ್ರಶ್ನೆಯನ್ನು ಅವರು ನಮ್ಮ ಮುಂದಿಟ್ಟಿದ್ದಾರೆ. ಅದರ ಬಗ್ಗೆ ಈ ಸದನದ ಮುಂಖಾಂತರ ಹೇಳುವುದೇನೆಂದರೆ, ಕಾನೂನಿನ ಚೌಕಟ್ಟಿನಲ್ಲಿ ಒಂದು ಕಿಂಚಿತ್ತೂ ಮೀರದೆ ಈ ಶಾಸನ ಸಭೆಗಳು ಏನು ಅಧಿಕಾರವನ್ನು ಕೊಟ್ಟಿವೆ ಅದನ್ನು ಮಾತ್ರ ಚಲಾಯಿಸಿದ್ದೇವೆ, ಎನ್ನತಕ್ಕಂತಹದ್ದನ್ನು ನಮ್ಮವಾಗಿ ಹೇಳಂತ್ತೇನೆ, ಇರತಕ್ಕ ಕಾನೂನನ್ನು ತಮ್ಮ ಮುಂದೆ ಇಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇವತ್ತು ಆ ಶಾಸನದ ಪ್ರಕಾರ ಇಬ್ಬರು ಸದಸ್ಯರನ್ನು ನಾಮಂಕರಣ ಮಾಡತಕ್ಕಂಥದ್ದು. ನೀವು ಮಾಡುತ್ತಿದ್ದೀರಿ, ನಿಮ್ಮ ರಾಜಕೀಯ ಲಾಭಕ್ಕಾಗಿ ಮಾಡುತ್ತಿದ್ದೀರಿ ಎನ್ನತಕ್ಕಂತಹ ಘೋಷಣೆಯನ್ನು ಅವರು ಹೇಳುತ್ತಿದ್ದಾರೆ. ಇದು ಕಂತಂತ್ರ, ಅಸತ್ಯ, ಸತ್ಯಕ್ಕೆ ದೂರ ಎಂದು ಏನೆಲ್ಲಾ ಹೇಳಿದ್ದಾರೆ. ಈ ಶಾಸನವನ್ನು ಮಾಡಿದ್ದಾದು ೧೯೪೪ರಲ್ಲಿ. ಸನ್ಮಾನ್ಯ ಯಡಿಯೂರಪ್ಪನವರು ಹೊರಟು ಹೋದರು. ಅವರೂ ಕೂಡ ಈ ಸದನದಿಂದ ರಚಿಸಲ್ಪಟ್ಟಿದ್ದ ಜಂಟಿ ಸಲಹಾ ಸಮಿತಿಯ ಸದಸ್ಯರಾಗಿದ್ದರು. ಮಂತ್ರಿ ಈ ಸದನದಲ್ಲಿ ಚರ್ಚೆಯಾಗಿ ಕೊನೆಯ ಹಂತದಲ್ಲಿ, ಅದನ್ನು ಪಾಸು ಮಾಡುವ ಹಂತದಲ್ಲಿ, ಸುಮಾರು ೧೯–೨೦ ಅದಕ್ಕೆ ತಿದ್ದುಪಡಿಗಳು ಇದ್ದವು. ಆ ತಿದ್ದುಪಡಿಯಲ್ಲಿ ಯಾವುದೇ ತಿದ್ದುಪಡಿ ಈ ಒಂದು ನಾಮನಿರ್ದೇಶನ ಏನು ಇದೆ. ಎರಡು ವರ್ಗದ ಜನರಿಗೆ ಸಮಾಜದಲ್ಲಿ ಅತ್ಯಂತ ಕೆಳವರ್ಗದ ಹಿಂದುಳಿದವರ್ಗದ ಜನರಿಗೆ ಕೊಡಬೇಕು ಅಂತ ಇದೆ, ಆ ನಾಮಿನೇಷನ್ ಬಗ್ಗೆ ಯಾವುದೇ ಒಂದು ರೀತಿಯ ತಿದ್ದುಪಡಿಯೂ ಇರಲಿಲ್ಲ, ಇದು ದಾಖಲೆಯಲ್ಲಿದೆ. ಬಹುಶಃ ದಾಖಲೆಯನ್ನು ಶರಿಸಿ ತಾವು ನೋಡಬಹುದು. ಆಂದ ಮೇಲೆ ಎರಡು ಸದನಗಳು ,ಒಮ್ಮತದ ಅಭಿಪ್ರಾಯವನ್ನು ನಾಮಿನೇಷನ್ ಮಾಡಬೇಕು ಎಂಬುದರ ಪರವಾಗಿ ಇತ್ತು ಎಂದು ತೀರ್ಮಾನಿಸಂತ್ತದೆ. ಆದರೆ ಯಾರನ್ನು ನಾಮಕರಣ ಮಾಡಬೇಕು, ಯಾವ ವರ್ಗಗಳು ತಮ್ಮ ಸ್ವಶಕ್ತಿಯಿಂದ ಅಥವಾ, ಚುನಾವಣೆಯಲ್ಲಿ ಗೆದ್ದು ಬಂದು ಮಂಡಲ್ ಪಂಚಾಯಿತಿಯಲ್ಲಿ ಪ್ರಾತಿನಿಧ್ಯವನ್ನು ಪಡೆಯಲಾರವೊ, ಆ ಅತ್ಯಂತ ಕೆಳವರ್ಗದ ಶಕ್ತಿಗಳಿಗೆ ಈ ವರ್ಗದ ಜನರಿಗೆ ಪ್ರಾತಿನಿಧ್ಯವನ್ನು ಕೊಡಬೇಕೆಂಬುದು ಈ ಸದನಗಳ ಅಭಿಪ್ರಾಯ, ಈ ಎರಡೂ ಸದನಗಳ ಅಭಿಪ್ರಾಯದ ಮೇರೆಗೆ ಶಾಸನ ರಚನೆಯಾಯಿತು. ಆ ರೀತಿ ರಚನೆಯಾದ ಶಾಸನದ ಅಧಿಕಾರವನ್ನು ನಾವು ಇವತ್ತು ಚಲಾಯಿಸಿದ್ದೇವೆ, ಅಷ್ಟೆ. ಶಾಸನ